# ಮನೆಗೆ ಮರಳಿ ಬಂದಾಳೇ ಮಾಯಕ್ಕ?

## ನಂಬಿಕೆಯ ನೂಲು

■ ಬಸು ಬೇವಿನಗಿಡದ
ಕಲೆ: ಎಚ್.ಎಸ್. ಮೋನಪ್ಪ

ಮರುದಿನ ಮುಂಜಾನೆ ದೇವಣ್ಣ ಅಧೀರನಾಗಿದ್ದ. ತನ್ನ ಮನೆ ಮತ್ತು ಮನವನ್ನು ಕವಿದಿರುವ ಆತಂಕ ಮರೆಯಾದರೆ ಸಾಕು. ಮಾಯಿಯನ್ನು ತಾನು ಯಾವಾಗ ಕಾಣುವೆನೊ, ಯಾವಾಗ ಅವಳೊಂದಿಗೆ ಮಾತಾಡುವೆನೊ ಎನ್ನುವ ಕಾತರ ಅವನಿಗೆ. ತನ್ನೊಂದಿಗೆ ಮೊದಲಿನಂತೆ ಮಾತಾಡುತ್ತಾಳೊ ಇಲ್ಲವೊ? ಮೊದಲಿನಂತೆ ಪ್ರೀತಿ ತೋರುತ್ತಾಳೊ ಇಲ್ಲವೊ? ಪ್ರೀತಿಯನ್ನು ಕಳೆದುಕೊಳ್ಳುತ್ತಿರುವಾಗಲೇ ಅದರ ಮಹತ್ವ ಎಷ್ಟೆಂದು ಅರಿವಿಗೆ ಬರುವುದು. ಈಗ ಅವಳನ್ನು ನೋಡಿಕೊಳ್ಳಲು ಹೋಗಿರುವ ಸಾವಂತ್ರವ್ವ ಸಾಂತ್ವನ ಹೇಳುತ್ತಲೇ ಇಲ್ಲಸಲ್ಲದ್ದು ಕಲಿಸಿಕೊಟ್ಟರೆ? ಇನ್ನಷ್ಟು ಹಟಮಾರಿಯನ್ನಾಗಿಸಿದರೆ? ಅವಳಲ್ಲಿ ಇನ್ನಷ್ಟು ಅಹಂಕಾರ ತುಂಬಿ ಕಳಿಸಿದರೆ? ಇದರಲ್ಲಿ ಬರೀ ಸಾವಂತ್ರವ್ವ ಮಾತ್ರ ಇರುವುದಿಲ್ಲ. ಅವಳಂತಹ ಹತ್ತು ಮಂದಿ ಇರುತ್ತಾರೆ. ಅಷ್ಟು ಜನ ಒಬ್ಬರಾದ ಮೇಲೆ ಮತ್ತೊಬ್ಬರು ಮಾಯಿಯ ಕಿವಿಯೂದುತ್ತಾರೆ.

‘ಅಂವನ್ನ ನೀ ಹೆಂಗರ ಮದುವಿಯಾದೆ ಯವ್ವಾ?’ ಎಂದು ಅವಳಲ್ಲಿ ಹೇವರಿಕೆಯ ಬೀಜ ಬಿತ್ತಿದರೆ? ಅದರಿಂದ ಆಕರ್ಷಣೆಯ ಬದಲಿಗೆ ತಮ್ಮಲ್ಲಿ ವಿಕರ್ಷಣೆ ಹುಟ್ಟಿಕೊಂಡರೆ? ಮನೆಯಲ್ಲಿ ಅಸಾಂಗತ್ಯ ತಾಂಡವವಾಡತೊಡಗಿದರೆ? ಆಕೆ ನಿನ್ನೆ ಬಿಟ್ಟುಹೋಗಿದ್ದು ತನ್ನ ಪ್ರೀತಿಯಿಂದ ನಿರ್ಗಮಿಸುತ್ತಿರುವುದರ ಸಂಕೇತವೇ? ಒಟ್ಟಿನಲ್ಲಿ ಆಕೆಯನ್ನು ಸಂಭಾಳಿಸುವುದು ಮತ್ತಷ್ಟು ಕಷ್ಟದಾಯಕವೆನಿಸೀತು. ನಿನ್ನೆಯೇ ದುಂಡಪ್ಪಕಾಕಾ ಆ ದಿಶೆಯಲ್ಲಿ ಅಲ್ಪಸ್ವಲ್ಪ ಹೇಳಿಬಂದಿರಬಹುದು. ತನ್ನನ್ನು ಅವನ ನಿರ್ದೇಶನದಲ್ಲಿ ಇಟ್ಟುಕೊಳ್ಳುವುದು ಅವನಿಗೆ ಬೇಕಾಗಿದೆ. ತಮ್ಮ ಮನೆ ಜಗಳ ತಮ್ಮ ಮನೆಯಲ್ಲಿಯೆ ಮುಗಿದಿದ್ದರೆ ಚೆನ್ನಾಗಿತ್ತು. ಈಗ ಅದಕ್ಕೆ ಮುಕ್ತಾಯ ಕೊಡುವುದು ತನ್ನ ಕೈಯಲ್ಲಿಲ್ಲ. ಹೋಗಲಿ, ಯಾರದಾದರೂ ಕೈಯಲ್ಲಿರಲಿ. ಆದರೆ ಅದನ್ನು ಮುಗಿಸಿಕೊಡಲು ಎಷ್ಟೊಂದು ಸಮಯ ತೆಗೆದುಕೊಳ್ಳುತ್ತಿದ್ದಾರೆ? ತನ್ನ ವಿಲವಿಲ ಒದ್ದಾಡಿಸುತ್ತಿದ್ದಾರೆ. ಮನಸ್ಸಿನ ತಲ್ಲಣ ಹೇಗಿರುತ್ತದೆಯೆಂಬುದು ಅವರಿಗೇನು ಗೊತ್ತು? ಅವಳನ್ನು ಅಪೇಕ್ಷಿಸಿದರೆ ಒಂದು ಸಂಕಟ, ಉಪೇಕ್ಷಿಸಿದರೆ ಮತ್ತೊಂದು ಸಂಕಟ. ಈ ಉಭಯಸಂಕಟದಲ್ಲಿ ತಾನು ಬೇಯುತ್ತಿರುವೆ. ತನ್ನ ಮನದಲ್ಲಿ ಕ್ಷೋಭೆ, ಕೋಲಾಹಲವಿದೆಯೆಂದು ಹೊಟೇಲ್ ಬಾಗಿಲನ್ನು ತೆರೆಯದೆ ಇರಲಿಕ್ಕಾಗುತ್ತದೆಯೇ?

ಮತ್ತೆ ನಸುಕಿನಲ್ಲಿ ದೇವಣ್ಣ ಎದ್ದು ಗದಿಗೆಪ್ಪನನ್ನು ಎಬ್ಬಿಸಿದ. ಇಬ್ಬರೂ ಸೇರಿದರೆಂದರೆ ಬಿಸಿಬಿಸಿ ಉಪ್ಪಿಟ್ಟು, ಅವಲಕ್ಕಿ ತಯಾರಿಸಲು ಎಷ್ಟೊತ್ತು? ಊರಲ್ಲಿ ಮಂದಿ ಮಲಗುತ್ತಾರೊ? ಇಲ್ಲವೊ? ಇನ್ನೂ ಚುಮುಚುಮು ನಸುಕಿನಲ್ಲಿಯೆ ಹೊಟೇಲ್ ಬಾಗಿಲು ತುಳಿಯುತ್ತಾರೆ. ಒಮ್ಮೊಮ್ಮೆ ತಾವುಎದ್ದಿರದಿದ್ದರೂಏಳುವತನಕಹೊರಗೆಕಟ್ಟೆಯ ಮೇಲೆ ಕೂಡುತ್ತಾರೆ. ‘ದ್ಯಾವಣ್ಣ, ಉಪ್ಪಿಟ್ಟು ಗಿಪ್ಪಿಟ್ಟು ಆಮ್ಯಾಲ ಮಾಡುವಂತೆ. ಮೊದಲು ಅರ್ಜೆಂಟಿಗೆ ಕಪ್ ಬಿಸಿಬಿಸಿ ಚಹಾ ಮಾಡು. ನಾವು ಹೊರಗ ನಾಕ ಮಂದಿ ಅದೇವಿ. ನೀವು ಒಳಗ ಇಬ್ಬರುಮೂವರು. ಒಟ್ಟು ಹತ್ತುಹನ್ನೆರಡು ಕಪ್ ಇಡು ಅಂತ ಗದಿಗೆಪ್ಪಗ ಹೇಳು. ಅವರೆ ಗದಿಗೆಪ್ಪನಿಗೆ ಹೊರಗಡೆ ಕುಳಿತು ಆರ್ಡರ್ ಕೊಡುವರು!

‘ಹೂಂನ್ರಿ. ಆಯಿತ್ರಿ ಸಾಹುಕಾರ್ರೆ’, ಇವನು ಅಷ್ಟೆ ತಮಾಷೆ, ಉತ್ಸುಕತೆಯಿಂದ ಉತ್ತರಿಸುವನು.

